ಶ್ರೀ ಇಕ್ಬಾಲ್ ಅನ್ಸಾರಿ: ಇದರಲ್ಲಿ ನಮ್ಮ ಪಾತ್ರ ಏನಿದೆ, ನಾನು ಕೇಂದ್ರ ಸರ್ಕಾರಕ್ಕೆ ಮನವಿಯನ್ನು ಮಾಡಿಕೊಂಡು, ಕೇಂದ್ರ ಸರ್ಕಾರದ ಕಾರ್ಮಿಕರ ಸಚಿವರ ಜೊತೆ ಕುಳಿತುಕೊಂಡು ಇದನ್ನು ಬದಲಾಯಿಸುವುದಕ್ಕೆ ಸರ್ವ ಪ್ರಯತ್ನವನ್ನು ಮಾಡುತ್ತೇನೆ. ಪರಿಶೀಲನೆ ಎಂದರೆ ಕ್ರಮ ತೆಗೆದುಕೊಳ್ಳುತೇನೆ ಎಂದು ಅರ್ಥ.

ಶ್ರೀ ಸಿಂಧೂರ ರಾಜಶೇಖರ: ಇದರ ಬಗ್ಗೆ ಬೀಡಿ ಕಾರ್ಮಿಕರ ಜೊತೆ ಚರ್ಚೆ ಮಾಡಿದರೆ ಈ ವಿಷಯ ನಮಗೆ ಗೊತ್ತಾಗುತ್ತದೆ.

ಅಧ್ಯಕ್ಷರು: ಮಾನ್ಯ ಕೃಷ್ಣಭೈರೇಗೌಡರವರೆ ತಮ್ಮದು ಕೊನೆಯ ಪ್ರಶ್ನೆ.

ನೂತನ ವಸತಿ ನಿಲಯಗಳ ಸ್ಥಾಪನೆ

113 (530) ಶ್ರೀ ಕೃಷ್ಣ ಬೈರೇಗೌಡ ಸಿ.ಬಿ. (ವೇಮಗಲ್) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೋಲಾರ ಜಿಲ್ಲಾ ವೇಮಗಲ್ ಕ್ಷೇತ್ರದಲ್ಲಿ ಹಿಂದುಳಿದ ವರ್ಗಗಳ ಹಾಗೂ ಪರಿಶಿಷ್ಟ ಜಾತಿ ಮತ್ತು ವರ್ಗಗಳ ನೂತನ ವಸತಿ ನಿಲಯಗಳ ಸ್ಥಾಪನೆಗೆ ಹಾಗೂ ಹಾಲಿ ವಸತಿ ನಿಲಯಗಳ ಕಟ್ಟಡ ನಿರ್ಮಾಣಕ್ಕೆ ಸರ್ಕಾರಕ್ಕೆ ಬಂದಿರತಕ್ಕಂತಹ ಪ್ರಸ್ತಾವನೆಗಳೆಷ್ಟು;

ಆ) ಹಾಗಿದ್ದಲ್ಲಿ, ಪ್ರಸಕ್ತ ಸಾಲಿನಲ್ಲಿ ವಸತಿ ನಿಲಯಗಳಿಗೆ ಬೇಕಾದ ಸೌಲಭ್ಯಗಳನ್ನು ಮಂಜೂರು ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಬಾಲಚಂದ್ರ ಲ. ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು) :

ಅ) **ಸಮಾಜ ಕಲ್ಯಾಣ ಇಲಾಖೆ :**

ಕೋಲಾರ ಜಿಲ್ಲೆಯ ವೇಮಗಲ್ ಕ್ಷೇತ್ರದಲ್ಲಿ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗಾಗಿ 2 ಮೆಟ್ರಿಕ್ ಪೂರ್ವ ಬಾಲಕರ ಹಾಗೂ 3 ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿ ನಿಲಯಗಳನ್ನು ಹೊಸದಾಗಿ ಪ್ರಾರಂಭಿಸಲು ಪ್ರಸ್ತಾವನೆಗಳು ಬಂದಿರುತ್ತವೆ.

ಸರ್ಕಾರಿ ವಿದ್ಯಾರ್ಥಿನಿಲಯ, ನರಸಾಪುರದ ಕಟ್ಟಡ ನಿರ್ಮಾಣ ಕೈಗೊಳ್ಳಲು ಪ್ರಸ್ತಾವನೆ ಬಂದಿದ್ದು, ಅದಕ್ಕಾಗಿ ನಿವೇಶನ ಪಡೆಯಲು ಕ್ರಮವಹಿಸಲಾಗಿದೆ. ನಿವೇಶನ ಲಭ್ಯವಾದ ನಂತರ ಕಟ್ಟಡ ನಿರ್ಮಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು.

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ:

2006–07ನೇ ಸಾಲಿನಲ್ಲಿ ಕೋಲಾರ ಜಿಲ್ಲೆ ವೇಮಗಲ್ ಕ್ಷೇತ್ರದಿಂದ ಪರಿಶಿಷ್ಟ ವರ್ಗಗಳ ನೂತನ ವಸತಿ ನಿಲಯಗಳ ಸ್ಥಾಪನೆಗೆ ಯಾವುದೇ ಪ್ರಸ್ತಾವನೆ ಬಂದಿರುವುದಿಲ್ಲ. ಮತ್ತು ಅಲ್ಲಿ ಪರಿಶಿಷ್ಟ ವರ್ಗದ ಕಲ್ಯಾಣ ಇಲಾಖೆಯ ವಿದ್ಯಾರ್ಥಿನಿಲಯಗಳಿರುವುದಿಲ್ಲ.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ :

ವೇಮಗಲ್ ಮತ ಕ್ಷೇತ್ರದಲ್ಲಿ ಕೆಳಕಂಡ ಸ್ಥಳಗಳಲ್ಲಿ ಹೊಸ ವಿದ್ಯಾರ್ಥಿನಿಲಯಗಳನ್ನು ಮಂಜೂರು ಮಾಡುವಂತೆ ಬೇಡಿಕೆ ಬಂದಿರುತ್ತದೆ.

ಕ್ರ.ಸಂ.	ವಿವರ	ಗ್ರಾಮ ಮತ್ತು ತಾಲ್ಲೂಕು
1	ಮೆಟ್ರಿಕ್–ಪೂರ್ವ ಬಾಲಕರ ನಿಲಯ	ನರಸಾಪುರ
2	ಮೆಟ್ರಿಕ್–ಪೂರ್ವ ಬಾಲಕರ ನಿಲಯ	ಮುದ್ದೇನಹಳ್ಳಿ
3	ಮೆಟ್ರಿಕ್–ಪೂರ್ವ ಬಾಲಕರ ನಿಲಯ	ಕುರುಗಲ್
4	ಮೆಟ್ರಿಕ್–ಪೂರ್ವ ಬಾಲಕರ ನಿಲಯ	ನಾಯಕರಹಳ್ಳಿ
5	ಮೆಟ್ರಿಕ್–ಪೂರ್ವ ಬಾಲಕರ ನಿಲಯ	ವೆಕ್ಕಲೇರಿ
6	ಮೆಟ್ರಿಕ್–ಪೂರ್ವ ಬಾಲಕರ ನಿಲಯ	ದೊಡ್ಡಬೊಮ್ಮನಹಳ್ಳಿ ಚಿಂತಾಮಣಿ ತಾ:
7	ಮೆಟ್ರಿಕ್–ಪೂರ್ವ ಬಾಲಕರ ನಿಲಯ	ಕೈವಾರ, ಚಿಂತಾಮಣಿ ತಾಲ್ಲೂಕು

ವೇಮಗಲ್ ಮತಕ್ಷೇತ್ರದಲ್ಲಿ ಹಾಲಿ 4 ವಿದ್ಯಾರ್ಥಿನಿಲಯಗಳಿದ್ದು, ಅವುಗಳಲ್ಲಿ 3ಕ್ಕೆ ಸ್ವಂತ ಕಟ್ಟಡ ಇರುತ್ತವೆ. ಇನ್ನೊಂದು ಕಟ್ಟಡದ ನಿರ್ಮಾಣ ಕಾರ್ಯವನ್ನು ಜಿಲ್ಲಾವಲಯದಲ್ಲಿ ತೆಗೆದುಕೊಳ್ಳಲಾಗಿದೆ. ಹೀಗಾಗಿ ವಿದ್ಯಾರ್ಥಿನಿಲಯಗಳ ಕಟ್ಟಡ ನಿರ್ಮಾಣಕ್ಕೆ ಪ್ರಸ್ತಾವನೆ ಬಂದಿರುವುದಿಲ್ಲ.

ಆ) ಹೌದು. ಸಮಾಜ ಕಲ್ಯಾಣ ಇಲಾಖೆ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗಳ ಅಡಿಯಲ್ಲಿ ಬರುವ ವಿದ್ಯಾರ್ಥಿನಿಲಯಗಳಲ್ಲಿ ವಾಸವಾಗಿರುವ ವಿದ್ಯಾರ್ಥಿಗಳಿಗೆ ಅವಶ್ಯಕವಾದ ಹಾಸಿಗೆ, ಹೊದಿಕೆ, ಸಮವಸ್ತ್ರ, ಸೋಪು, ಪುಸ್ತಕ ಇತ್ಯಾದಿಗಳನ್ನು ನೀಡಲಾಗುತ್ತಿದೆ.

ಬಾಡಿಗೆ ಕಟ್ಟಡದಲ್ಲಿರುವ ವಿದ್ಯಾರ್ಥಿನಿಲಯಗಳಿಗೆ ಸ್ವಂತ ಕಟ್ಟಡ ನಿರ್ಮಿಸಲು ನಿವೇಶನದ ಹಾಗೂ ಅನುದಾನದ ಲಭ್ಯತೆಯನ್ನು ಅನುಸರಿಸಿ ಅಗತ್ಯ ಕ್ರಮ ಕೈಗೊಳ್ಳಲಾಗುವುದು. ಸ್ವಂತ ಕಟ್ಟಡ ಹೊಂದಿರುವ ವಿದ್ಯಾರ್ಥಿನಿಲಯಗಳಿಗೆ ಸುಣ್ಣ–ಬಣ್ಣ, ಶೌಚಾಲಯ, ವಿದ್ಯುತ್, ಅಡಿಗೆ ಮನೆ, ಸ್ನಾನ ಗೃಹ, ನೀರಿನ ಸೌಲಭ್ಯ ಇತ್ಯಾದಿ ಅವಶ್ಯಕ ದುರಸ್ತಿ ಕಾಮಗಾರಿಗಳನ್ನು ಆಯವ್ಯಯದಲ್ಲಿ ಒದಗಿಸಿರುವ ಅನುದಾನದ ಮಿತಿಯಲ್ಲಿ ಹಾಗೂ ವಿಶೇಷ ಘಟಕ ಯೋಜನೆಯಡಿ ಗುಂಪುಗೂಡಿಸಿದ ಅನುದಾನದಿಂದ ಬಿಡುಗಡೆಯಾಗುವ ಅನುದಾನವನ್ನು ಅನುಸರಿಸಿ, ಆದ್ಯತೆಯ ಮೇಲೆ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳಲಾಗುವುದು.

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ವಿದ್ಯಾರ್ಥಿ ನಿಲಯಗಳಿಲ್ಲದಿರುವುದರಿಂದ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಕೃಷ್ಣ ಬೈರೇಗೌಡ: ಮಾನ್ಯ ಅಧ್ಯಕ್ಷರೆ, ನಾನು ಸುಮಾರು 4–5 ವರ್ಷಗಳಿಂದ ವಸತಿ ನಿಲಯಗಳ ಬಗ್ಗೆ ಕೇಳುತ್ತಲೇ ಇದ್ದೇವೆ. ಇವರು ನಮ್ಮ ಕ್ಷೇತ್ರವನ್ನು ignore ಮಾಡುತ್ತಲೇ ಬರುತ್ತಿದ್ದಾರೆ. ನಮ್ಮಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರ ಜನಸಂಖ್ಯೆ ಜಾಸ್ತಿ ಇದೆ. ಇವರ ಇಲಾಖೆಯಲ್ಲಿ ಆ ಸಂಖ್ಯೆಗಳು ಕೂಡ ಸರಿಯಾಗಿಲ್ಲ. ಮುದ್ದೇನಹಳ್ಳಿ ಎಂದು ಮಾಹಿತಿಯನ್ನು ಕೊಟ್ಟಿದ್ದಾರೆ, ಅದು ಸರಿಯಾಗಿಲ್ಲ. ಮುದ್ದೇನಹಳ್ಳಿ ಎಂದು ಕೊಟ್ಟಿದ್ದಾರೆ ಅದು ಚಿಕ್ಕಬಳ್ಳಾಪುರ ತಾಲ್ಲೂಕಿಗೆ ಬರುತ್ತದೆ. ಇನ್ನೊಂದು ನಾಯಕರಹಳ್ಳಿ ಎಂದು ಕೊಟ್ಟಿದ್ದಾರೆ. ಅದು ಕೋಲಾರ ಕ್ಷೇತ್ರಕ್ಕೆ ಬರುತ್ತದೆ. ಅದು ನನ್ನ ಕ್ಷೇತ್ರದ್ದಲ್ಲ. ಆ ಎಲ್ಲಾ ಮಾಹಿತಿಯನ್ನು ಕೊಟ್ಟಿದ್ದಾರೆ. ನಮ್ಮ ಕ್ಷೇತ್ರದಲ್ಲಿರುವಂತಹ ಪರಿಶಿಷ್ಟ ವರ್ಗ ಮತ್ತು ಜಾತಿಯ ಜನಸಂಖ್ಯೆ ಸರಿಯಿಲ್ಲ. ನಾನು ಅದನ್ನು ದೃಢೀಕರಿಸಿದಂತಹ census figuresನ್ನು ಕೊಟ್ಟಿದ್ದರೂ ಸಹ ಅವರ ಅಧಿಕಾರಿಗಳು ಅದನ್ನು ಸರಿಪಡಿಸಿಕೊಳ್ಳಲಿಲ್ಲ. ನಮ್ಮಲ್ಲಿ ಹೆಚ್ಚಿಗೆ SC ಮತ್ತು ST ಜನಸಂಖ್ಯೆ ಇದೆ. ತಾವು ಕೇವಲ ನಂಜುಂಡಪ್ಪ ವರದಿಯನ್ನು ಆಧಾರವಾಗಿಟ್ಟುಕೊಂಡು ಮಾಡಿದರೆ ನಮ್ಮಲ್ಲಿರುವಂತಹ ಪರಿಶಿಷ್ಟ ವರ್ಗದವರಿಗೆ ಮತ್ತು ಪರಿಶಿಷ್ಟ ಜಾತಿಯವರಿಗೆ ತುಂಬಾ ಅನ್ಯಾಯವಾಗುತ್ತದೆ. ಹಿಂದುಳಿದ ವರ್ಗದವರ ಜನಸಂಖ್ಯೆಯೂ ಕೂಡ ಹೆಚ್ಚು ಇದೆ. ನಾನು ತಮ್ಮಲ್ಲಿ ಒತ್ತಾಯವನ್ನು ಮಾಡುವುದು ಇಷ್ಟೇ. ಇದರಲ್ಲಿ ಬೇರೆ ರಾಜಕೀಯ ಒತ್ತಡಗಳು ಇರುತ್ತದೆ. ಆದರೆ ಕನಿಷ್ಟ ಪಕ್ಷ, ಎಲ್ಲಿ ಆ ಜನಸಂಖ್ಯೆ ಜಾಸ್ತಿ ಇದೆ, ಅಲ್ಲಿಯಾದರೂ ಅವರಿಗೆ ಸೌಲಭ್ಯವನ್ನು ಕಲ್ಪಿಸದೇ ಹೋದರೆ ಬಹಳ ಅನ್ಯಾಯವಾಗುತ್ತದೆ. ನಾನು ಕಳೆದ 5 ವರ್ಷಗಳಿಂದಲೂ

ಸಹ ಕೇಳುತ್ತಿದ್ದೇನೆ. ಇದರ ಬಗ್ಗೆ ಮಾನ್ಯ ಸಚಿವರಿಂದ ಸ್ಪಷ್ಟವಾದ ಉತ್ತರ ಬರಬೇಕು. ಅಂಕಿಸಂಖ್ಯೆಗಳು ತಪ್ಪು ಇರುವುದರಿಂದ, ಗಂಗಾಕಲ್ಯಾಣ ಕೊಳವೆ ಬಾವಿಗಳು ಕೂಡ ನಮಗೆ ಬರಿ ಅರ್ಧದಷ್ಟು ಬರುತ್ತಿದೆ. ಏಕೆಂದರೆ, ತಮ್ಮ ಅಭಿವೃದ್ಧಿ ನಿಗಮದಲ್ಲಿ ಅಂಕಿಸಂಖ್ಯೆಗಳು ಸರಿಯಾಗಿಲ್ಲ. ಅದನ್ನು ಸರಿಪಡಿಸಿ ದೃಢೀಕರಿಸಿದರೂ ಕೂಡ ಅದನ್ನು ಸರಿಪಡಿಸಿಕೊಂಡಿರುವುದಿಲ್ಲ. ಅದು ಏನು ಎನ್ನುವುದರ ಬಗ್ಗೆ ತಾವು ಸ್ಪಷ್ಟಪಡಿಸಬೇಕು.

ಶ್ರೀ ಬಾಲಚಂದ್ರ ಲ. ಜಾರಕಿಹೊಳಿ: ಮಾನ್ಯ ಸದಸ್ಯರು, ನಮ್ಮ ಇಲಾಖೆಯಲ್ಲಿ ಅಂಕಿಸಂಖ್ಯೆಗಳು ಸರಿ ಇಲ್ಲದೇ ಇರುವುದರಿಂದ ಅವರಿಗೆ ಗಂಗಾಕಲ್ಯಾಣ ಯೋಜನೆಯಲ್ಲಿ ಬೋರ್‌ವೆಲ್ ಕಡಿಮೆ ಬರುತ್ತಿದೆ, ಎಂದು ಅವರು ಈಗ ನನ್ನ ಗಮನಕ್ಕೆ ತಂದಿದ್ದಾರೆ. ಆ ಅಂಕಿಸಂಖ್ಯೆಯನ್ನು ಸರಿಮಾಡಿಸಿ ಅದರಿಂದ ನಮ್ಮಲ್ಲಿರುವಂತಹ SC ಮತ್ತು ST ಫಲಾನುಭವಿಗಳಿಗೆ ಎಷ್ಟು ಬೋರ್‌ವೆಲ್‌ಗಳು ಸಿಗಬೇಕೋ, ಅದನ್ನು ಸದ್ಯದಲ್ಲಿ ಸರಿಮಾಡಿಸಿ ಅದರಿಂದ ತೊಂದರೆಯಾಗದ ರೀತಿಯಲ್ಲಿ ಕ್ರಮ ತೆಗೆದುಕೊಳ್ಳುತ್ತೇನೆ. ಹಾಸ್ಟೆಲ್‌ಗಳ ಬಗ್ಗೆ ಹೇಳಿದರು. ಅವರ ಕ್ಷೇತ್ರದಲ್ಲಿ SC ಮತ್ತು ST population ಜಾಸ್ತಿ ಇದೆ, ಇಲ್ಲಿಯವರೆವಿಗೂ ಒಂದು SC:ST Hostel ಇಲ್ಲವೆಂದು ನನ್ನ ಗಮನಕ್ಕೆ ತಂದಿದ್ದಾರೆ. ಬರುವ ಮಾರ್ಚಿಯಲ್ಲಿ ಬಜೆಟ್ ಆದ ನಂತರ ತಮ್ಮ ಕ್ಷೇತ್ರಕ್ಕೆ ಹಾಸ್ಟೆಲ್‌ಗಳನ್ನು ಕೊಡುತ್ತೇನೆ.

ಶ್ರೀ ಕೃಷ್ಣ ಬೈರೇಗೌಡ: ಬಜೆಟ್ ಆದ ಮೇಲೆ ಎಂದು ಹೇಳುವುದು ಸರಿಯಲ್ಲ. ಅಲ್ಲಿ ನೋಡು ಎಂದು ಹೇಳಿ ಹೋಗುವುದು ಸರಿಯಲ್ಲ. ಈಗಲಾದರೂ ಮಾಡುವ ಹಾಗೆ ಮಾಡಿ. ಅಲ್ಲಿ ನೋಡು ಹಿಮಾಲಯವನ್ನು ನೋಡು, ಎಂದು ಹೇಳಿದರೆ ನಾವು ಹಿಮಾಲಯವನ್ನು ನೋಡುವುದಕ್ಕೆ ಆಗುತ್ತದೆಯೇ? ನಾನು ಬೊಂಬಾಯಿಯನ್ನು ನೋಡಿಯೇ ಇಲ್ಲ ಸಾರ್, ನಾನು ನಿಮ್ಮನ್ನು ಮಾತ್ರ ನೋಡುತ್ತಿದ್ದೇನೆ.

ಶ್ರೀ ಬಾಲಚಂದ್ರ ಲ. ಜಾರಕಿಹೊಳಿ: ಈಗಾಗಲೇ ಫೆಬ್ರವರಿ ತಿಂಗಳು ನಡೆಯುತ್ತಿದೆ. ಮುಂದಿನ ತಿಂಗಳು ಬಜೆಟ್ ಸೆಷನ್ ಬರುತ್ತದೆ. ನಾನು ಈಗಲೇ ಹೇಳುತ್ತೇನೆ, ನಿಮ್ಮ ಕ್ಷೇತ್ರಕ್ಕೆ ಒಂದು ST:BCM Hostel ನ್ನು ಕೊಡುತ್ತೇನೆಂದು floorನಲ್ಲಿಯೇ ಹೇಳುತ್ತೇನೆ. ಇದಕ್ಕೆ ತಾವು ಸಮಾಧಾನವನ್ನು ಪಡೆದುಕೊಳ್ಳಬೇಕು.

ಶ್ರೀ ಕೃಷ್ಣ ಬೈರೇಗೌಡ: ಧನ್ಯವಾದಗಳು.

ಅಧ್ಯಕ್ಷರು: ಈಗ ಪ್ರಶ್ನೋತ್ತರವನ್ನು ಮುಗಿಸಲಾಗಿದೆ. ಲಿಖಿತ ಮೂಲಕ ಉತ್ತರಿಸುವಂತಹ ಪ್ರಶ್ನೆಗಳು. ಇದಕ್ಕೆಲ್ಲಾ ನೀವೇ ಜವಾಬ್ದಾರರು.

ಶ್ರೀ ಎಸ್.ಎಸ್. ಪಾಟೀಲ್: ಇನ್ನು 2–3 ಪ್ರಶ್ನೆಗಳು ಇರುವುದರಿಂದ ತಾವು ಅವಕಾಶವನ್ನು ಕೊಡಬೇಕು.

ಅಧ್ಯಕ್ಷರು: ಇಲ್ಲಿ ಒಂದು ಡಿಸಿಪ್ಲಿನ್ ಇಲ್ಲ. ಈಗಾಗಲೇ 12–15 ಗಂಟೆಯಾಯಿತು.

ಶ್ರೀ ಎಸ್.ಎಸ್. ಪಾಟೀಲ್: ಇನ್ನು ಅರ್ಧ ಗಂಟೆ ಅವಕಾಶ ಕೊಡಿ. ಇನ್ನು 2–3 ಪ್ರಶ್ನೆಗಳು ಇದೆ.

ಶ್ರೀ ಡಿ.ಆರ್. ಪಾಟೀಲ್: ತಾವು 1 ಗಂಟೆವರೆಗೆ ಪ್ರಶ್ನೋತ್ತರ ಮಾಡುತ್ತೇನೆಂದು ಹೇಳಿದ್ದಿರಿ.

ಅಧ್ಯಕ್ಷರು: 1 ಗಂಟೆ ಅಂದರೆ ಇವತ್ತು 1 ಗಂಟೆಯವರೆಗೆ ಅಲ್ಲ. ನಾನು ಪ್ರತಿದಿನ ಹೇಳುತ್ತಾ ಬಂದರೂ ಕೂಡ ನೀವು ಯಾರೂ ಕೂಡ ಸಹಕರಿಸುತ್ತಿಲ್ಲ. ನಾನು ಹುಡುಗಾಟ ಮಾಡುವುದಕ್ಕೆ ಸಾಧ್ಯವಿಲ್ಲ. ಇದರ ಬಗ್ಗೆ ಒಂದೆರಡು ಸಾರಿ ಹೇಳಬಹುದು. ಏನಾಗಿದೆ all of you have taken it very easy.

ಶ್ರೀ ಡಿ.ಆರ್. ಪಾಟೀಲ್: ಯಾರೋ ಮಾಡಿದ ತಪ್ಪಿಗೆ

ಅಧ್ಯಕ್ಷರು: ಈಗ ಏನು ಮಾಡುವುದಕ್ಕಾಗುತ್ತದೆ? ನಿಮ್ಮವರೆ ಮಾಡಿರುವುದು.

ಶ್ರೀ.ಎಸ್.ಎಸ್. ಪಾಟೀಲ್: ನಾವು ಅರ್ಧ ಗಂಟೆ ಮಾತನಾಡುತ್ತೇವೆ.

ಅಧ್ಯಕ್ಷರು: ಈಗ ಪ್ರಶ್ನೋತ್ತರ ಮುಗಿಯಿತು. ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಆ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು): ಮಾನ್ಯ ಅಧ್ಯಕ್ಷರೆ, ದಿನಾಂಕ: 06–02–2007ರಂದು 6ನೇ ಪಟ್ಟಿಯ ಸದನದಲ್ಲಿ ಉತ್ತರಿಸುವ 15 ಪ್ರಶ್ನೆಗಳ ಪೈಕಿ 13 ಉತ್ತರಗಳನ್ನು ಹಾಗೂ ಲಿಖಿತ ಮೂಲಕ ಉತ್ತರಿಸುವ 171 ಪ್ರಶ್ನೆಗಳ ಪೈಕಿ 152 ಉತ್ತರಗಳನ್ನು ಹಾಗೂ ದಿನಾಂಕ: 07–02–2007ರಂದು 7ನೇ ಪಟ್ಟಿಯ ಸದನದಲ್ಲಿ ಉತ್ತರಿಸುವ 15 ಪ್ರಶ್ನೆಗಳ ಪೈಕಿ 15 ಉತ್ತರಗಳನ್ನು ಹಾಗೂ ತಡೆಹಿಡಿಯಲಾದ ಒಂದು ಪ್ರಶ್ನೆಯ ಉತ್ತರವನ್ನು ಮತ್ತು ಲಿಖಿತ ಮೂಲಕ ಉತ್ತರಿಸುವ 107 ಪ್ರಶ್ನೆಗಳ ಪೈಕಿ 97 ಉತ್ತರಗಳನ್ನು ಹಾಗೂ ದಿನಾಂಕ: 08–02–2007ರಂದು 8ನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 95 ಪ್ರಶ್ನೆಗಳ ಪೈಕಿ 90 ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು: ಮಂಡಿಸಲಾಯಿತು. (ಅನುಬಂಧ–ಅ)